**ಸಿ.ಸಿಃ 1353/2024**

**ಪ್ರಾ.ಸಾಃ 01**

## <u>ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬಸವನ-ಬಾಗೇವಾಡಿ</u>

**ಸಾಕ್ಷಿಗೆ ದಿನಾಂಕ 27.03.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎನ್.ಎಸ್.ಬಿ. ವಕೀಲರಿಂದಃ-</u>**

2 ನಾನು 4 ನೇ ತರಗತಿಯವರೆಗೆ ವಿದ್ಯಾಭಾಸ ಮಾಡಿರುತ್ತೇನೆ. ನನಗೆ ಓದಲು ಬರೆಯಲು ಬರುವುದಿಲ್ಲ. ಪೊಲೀಸ್ ಠಾಣೆಯಲ್ಲಿ ಪೊಲೀಸರು ಬರೆದಿರುತ್ತಾರೆ. ಪೊಲೀಸರು ನಾನು ಹೇಳಿದ ಹಾಗೆ ಬರೆದಿರುತ್ತಾರೆ. ದೂರಿನಲ್ಲಿ ಏನು ಬರೆಯಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಘಟನೆಯಾದ ನಾನು ಊರಿನಲ್ಲಿ ಇದ್ದೇನು, ಘಟನೆಯನ್ನು ನಾನು ಖುದ್ದಾಗಿ ನೋಡಿರುವುದಿಲ್ಲ. ಮೂರಾರ್ಜಿ ಶಾಲೆಯ ಹತ್ತಿರ Speed Breaker ಇರುತ್ತದೆ ಎಂದರೆ ಸರಿ. ಅಘಾತದ ದಿನ ಬೈಕ ಮೇಲೆ ನನ್ನ ತಂದೆ ಚಾಸಾ 6 ಮತ್ತು ಇನ್ನೊಬ್ಬರು ಹೋಗುತ್ತಿದ್ದರು ಎಂದರೆ ಸಾಕ್ಷಿಯು ಇಬ್ಬರೆ ಹೋಗುತ್ತಿದ್ದರು ಎಂದು ನುಡಿಯುತ್ತಾರೆ. ಚಾಸಾ 6 ರವರು ಕುಡಿದು ಚಲಾಯಿಸುತ್ತಿರುವ ಕಾರಣ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಚಾಸಾ 6 ರವರು ಜೊರಾಗಿ ವಾಹನ ಚಾಲಯಿಸುತ್ತಿದ್ದು Speed Breaker ಮೇಲೆ ಜಿಗಿಸಿದ ಕಾರಣ ನನ್ನ ತಂದೆ ಕೆಳಗೆ ಬಿದ್ದು ಅಪಘಾತದಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತಕ್ಕೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಅಪಘಾತವನ್ನು ಆರೋಪಿಯೇ ಮಾಡಿರುತ್ತಾನೆ ಎಂದು ಪೊಲೀಸರು ತಿಳಿಸಿರುತ್ತಾರೆ.

3. ನಾನು ಪೊಲೀಸರಿಗೆ ಮರುಹೇಳಿಕೆ ನೀಡಿರುತ್ತೇನೆ. ನಾನು ಪೊಲೀಸರಿಗೆ ಯಾವುದೇ ಮರುಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.ಘಟನೆ ಬಗ್ಗೆ ನನ್ನ ತಮ್ಮನು ತಿಳಿಸಿರುತ್ತಾನೆ. ಆ ಸಮಯದಲ್ಲಿ ನಾನು ಮುತ್ತಗಿ ಗ್ರಾಮದಲ್ಲಿ ಇದ್ದಾಗ ಕರೆ ಮಾಡಿ

ತಿಳಿಸಿರುತ್ತಾನೆ. ಘಟನೆಯಾದ ½ ಗಂಟೆ ನಂತರ ಘಟನಾ ಸ್ಥಳಕ್ಕೆ ಹೋಗಿರುತ್ತೇನೆ. ಮುತ್ತಗಿಯಿಂದ ಘಟನಾ ಸ್ಥಳ 4-5 ಕಿ.ಮೀ ಅಂತರ ಇರುತ್ತದೆ. ಮುತ್ತಗಿಯಿಂದ ಟಕ್ಕಳಕಿಗೆ ಹೋಗಿ ಅಲ್ಲಿಂದ ಮೋಟರ ಸೈಕಲ ಮೇಲೆ ಘಟನಾ ಸ್ಥಳಕ್ಕೆ ಹೋಗಿರುತ್ತೇವೆ. ಘಟನಾ ಸ್ಥಳದಿಂದ ಬ.ಬಾಗೇವಾಡಿ ಆಸ್ಪತ್ರೆಗೆ ½ ಗಂಟೆಯಲ್ಲಿ ಬಂದಿರುತ್ತೇವೆ. ಆರೋಪಿಯನ್ನು ಇದೆ ಮೊದಲ ಬಾರಿಗೆ ನೋಡುತ್ತಿದ್ದೆ ಎಂದರೆ ಸಾಕ್ಷಿಯು ಪೊಲೀಸರು ತೋರಿಸಿರುತ್ತಾರೆ ಎಂದು ನುಡಿಯುತ್ತಾರೆ. ಪರಿಹಾರ ಕೋರಿ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಅಪಘಾತದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರು ಸಹ ಪೊಲೀಸರ ಮಾತು ಕೇಳಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪರಿಹಾರ ಪಡೆದುಕೊಳ್ಳುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ಶ್ರೀ. ಅಮೀತ್ ಘಟ್ಟಿ )**
**ದಿವಾಣಿ ನ್ಯಾಯಾಧೀಶರು ಮತ್ತು**
**ನ್ಯಾಯಿಕ ದಂಡಾಧಿಕಾರಿಗಳು**
**ಬಸವನ ಬಾಗೇವಾಡಿ.**